② 12/03/2020

**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **693** (987) |
| ಸದಸ್ಯರ ಹೆಸರು | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | **12.03.2020** |
| ಉತ್ತರಿಸುವ ಸಚಿವರು | ಸನ್ಮಾನ್ಯ ಮುಖ್ಯಮಂತ್ರಿಯವರು |

| ಪ್ರಶ್ನೆ | ಉತ್ತರ |
|---|---|
| ಅ) ಶಾರ್ಟ್ ಸರ್ವೀಸ್ ಕಮೀಷನ್ಡ್ ಅಡಿಯಲ್ಲಿ ಸೇವೆ ಸಲ್ಲಿಸಿ ರಾಜ್ಯ ಸಿವಿಲ್ ಸೇವೆಯಲ್ಲಿರುವ ಅಧಿಕಾರಿಗಳಿಗೆ ಬಡ್ತಿ ನೀಡುವಾಗ ನಿಯಮಗಳಲ್ಲಿ ವಿಶೇಷ ಅವಕಾಶವಿದ್ದಾಗ್ಯೂ ಸರ್ಕಾರ ಇದನ್ನು ಪರಿಗಣಿಸದಿರುವುದು ನಿಜವೇ; ನಿಜವಿದ್ದಲ್ಲಿ ಕಾರಣಗಳೇನು; | ನಿಜವಲ್ಲ. |
| ಆ) ಕೇಂದ್ರ ಸರ್ಕಾರವು ಶಾರ್ಟ್ ಸರ್ವೀಸ್ ಕಮೀಷನ್ಡ್ ಅಧಿಕಾರಿಗಳ ನೇಮಕಾತಿ ಅರ್ಹತಾ ದಿನಾಂಕವನ್ನು ನಿರ್ಧರಿಸಲು ಆಯಾ ರಾಜ್ಯ ಸರ್ಕಾರಗಳೇ ಪ್ರಾಧಿಕಾರಗಳೆಂದು ಹೇಳಿದ್ದರೂ ಇಲ್ಲಿಯ ಸರ್ಕಾರಿ ಸಿವಿಲ್ ಸೇವೆಯಲ್ಲಿರುವ ನೌಕರರ ಜೇಷ್ಠತೆಯನ್ನು ಇನ್ನೂ ಏಕೆ ನಿಗದಿಪಡಿಸಿರುವುದಿಲ್ಲ; | ಐ.ಎ.ಎಸ್. ಮುಂಬಡ್ತಿಗಾಗಿ ಅರ್ಹತಾದಾಯಕವಾದ ಎಂಟು ವರ್ಷಗಳ ಸೇವೆಯನ್ನು ನಿರ್ಣಯಿಸುವಾಗ, Indian Administrative Service (Appointment by Promotion) Regulation, 1955 ರ ನಿಯಮ 5(2)ರನ್ವಯ, ಶಾರ್ಟ್ ಸರ್ವೀಸ್ ಕಮೀಷನ್ಡ್ ಅಧಿಕಾರಿಗಳ ಸೈನಿಕ ಸೇವೆಯನ್ನು ಪರಿಗಣಿಸಲಾಗುತ್ತದೆ. ಪ್ರತ್ಯೇಕವಾಗಿ ಜೇಷ್ಠತೆ ನಿಗದಿಪಡಿಸಲು ನಿಯಮವಿರುವುದಿಲ್ಲ. |
| ಇ) ಕೇಂದ್ರ ಲೋಕಸೇವಾ ಆಯೋಗವು ಬಡ್ತಿ ನಿಯಮಗಳಲ್ಲಿ ಶಾರ್ಟ್ ಸರ್ವೀಸ್ ಕಮೀಷನ್ಡ್ ಅಧಿಕಾರಿಗಳ ಜೇಷ್ಠತೆಯಲ್ಲಿ ಸೈನ್ಯದಲ್ಲಿ ಸಲ್ಲಿಸಿದ ಸೇವಾವಧಿಯನ್ನು ಪರಿಗಣಿಸಿ ನಿರ್ಧರಿಸಬೇಕು ಎಂದು ಸೂಚಿಸಿದ್ದಾಗ್ಯೂ ಕೇವಲ ರಾಜ್ಯ ಸಿವಿಲ್ ಸೇವೆಯ ಅವಧಿಯನ್ನು ಪರಿಗಣಿಸಿ ಕೇಂದ್ರ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಕಳುಹಿಸಿರುವುದು ನಿಜವೇ; ನಿಜವಿದ್ದಲ್ಲಿ ಕಾರಣಗಳೇನು; | ನಿಜವಲ್ಲ. |

| | |
|---|---|
| ಈ) ಕೇಂದ್ರ ಆಡಳಿತ ನ್ಯಾಯ ಮಂಡಳಿ ತನ್ನ ಪತ್ರ ಸಿಎಟಿ 230/2016 ರಲ್ಲಿ ಕಾನೂನಿಗೆ ವಿರುದ್ಧವಾದದ್ದೆಂದು ಹೇಳಿದ್ದರೂ ನಿಯಮಬಾಹಿರವಾಗಿ ಕೆಲವರಿಗೆ ಅರ್ಹತಾ ದಿನಾಂಕವನ್ನು ನಿಗದಿಪಡಿಸಿದ ಅಧಿಸೂಚನೆಯನ್ನು ಹಿಂಪಡೆದಿರುವುದು ನಿಜವೇ; ನಿಜವಿದ್ದಲ್ಲಿ, ಅವರ ಹೆಸರು ಮತ್ತು ಹುದ್ದೆ ಕುರಿತು ಮಾಹಿತಿ ನೀಡುವುದು; | ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಆಧರಿಸಿ, ಕಾನೂನು ಇಲಾಖೆಯ ಅಭಿಪ್ರಾಯದಂತೆ ಕ್ಯಾಪ್ಟನ್ ಡಾ॥ ಕೆ.ರಾಜೇಂದ್ರ, ಐಎಎಸ್ ಇವರಿಗೆ ಸಂಬಂಧಿಸಿದಂಥ ನೋಷನಲ್ ಜೇಷ್ಠತಾ ಆದೇಶವನ್ನು ಹಿಂಪಡೆಯಲಾಗಿದೆ. |
| ಉ) ಸರ್ಕಾರದ ಜೇಷ್ಠತಾ ನಿಯಮಗಳು 1957 ರ ನಿಯಮ 6(ಎ)ರ ಸೇವಾ ಜೇಷ್ಠತೆಯನ್ನು ಪರಿಗಣಿಸುವ ನಿಯಮಕ್ಕೆ ಅನ್ವಯವಾಗುವುದಿಲ್ಲ ಎಂದಾದರೆ ಅದಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳನ್ನು ಅವಲಂಬಿಸಿರುವುದು ನಿಜವೇ; | ಹೌದು. |
| ಊ) ನ್ಯಾಯಾಲಯ ನೀಡಿದ ಆದೇಶಗಳನ್ನು ಅವಲಂಬಿಸಿ ಕಾನೂನು ಅಭಿಪ್ರಾಯ ನೀಡುವಂತೆ ಕಾನೂನು ಇಲಾಖೆಯನ್ನು ಕೋರಿದ್ದೇಕೆ; ಕೋರಿದ್ದಲ್ಲಿ, ಇಂತಹ ಪ್ರಕರಣಗಳ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಬಡ್ತಿಯಿಂದ ಐ.ಎ.ಎಸ್. ಹುದ್ದೆಯನ್ನು ಬಯಸಿದ್ದಾರೆಯೇ; | ಕಾನೂನು ಇಲಾಖೆಯು ಅಭಿಪ್ರಾಯ ನೀಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯಗಳ ಆದೇಶ ಇರುವುದರಿಂದ ಅಂತಹ ಆದೇಶಗಳನ್ನು ಕಾನೂನು ಇಲಾಖೆಯ ಗಮನಕ್ಕೆ ತಂದು ಅಭಿಪ್ರಾಯ ಕೋರಲಾಗಿದೆ. ಇದೇ ರೀತಿಯ ಪ್ರಕರಣಗಳ ಅಡಿಯಲ್ಲಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ್ ಇವರು ಐ.ಎ.ಎಸ್. ಹುದ್ದೆಯನ್ನು ಬಯಸಿದ್ದಾರೆ. |

ಕಡತ ಸಂಖ್ಯೆ: ಇ–ಸಿಆಸುಇ 106 ಎಸ್‌ಎಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.